ಅ) ಹಣ ಬಿಡುಗಡೆಯಾಗದಿರುವ ಪ್ರಯುಕ್ತ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಕಾಡಾನೆ ಹಾವಳಿಯಿಂದಾದ ಪ್ರಾಣ ಹಾನಿ ಹಾಗೂ ರೈತರ ಆಸ್ತಿಪಾಸ್ತಿ ಬೆಳೆ ನಷ್ಟ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 684(1304)

ಸದಸ್ಯರ ಹೆಸರು : ಶ್ರೀ ಬಿ.ಎನ್.ಬಚ್ಚೇಗೌಡ(ಹೊಸಕೋಟೆ)

ಉತ್ತರಿಸುವ ಸಚಿವರು : ಶ್ರೀ ಕೆ.ಹೆಚ್.ರಂಗನಾಥ(ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ಕಾಡಾನೆ ಹಾವಳಿಯಿಂದ ಹಾನಿಗೊಳಗಾದ ರೈತರ ಆಸ್ತಿಪಾಸ್ತಿಗಳೆಷ್ಟು? ಇದರಿಂದಾಗಿ ಪ್ರಾಣ ಕಳೆದು ಕೊಂಡವರೆಷ್ಟು?

ಆ) ಹಾಗಿದ್ದಲ್ಲಿ ರೈತರಿಗೆ ಮತ್ತು ಪ್ರಾಣ ಕಳೆದುಕೊಂಡ ಕುಟುಂಬದವರಿಗೆ ಪರಿಹಾರವೇನಾದರೂ ನೀಡಲಾಗಿದೆಯೇ?

ಇ) ಕಾಡಾನೆ ಹಾವಳಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರವಾಗಿ ತಿಳಿಸುವುದು)

ಉತ್ತರ

ಅ) ರಾಜ್ಯದಲ್ಲಿ ಕಾಡಾನೆ ಹಾವಳಿಯಿಂದ ನಷ್ಟವಾಗಿರುವ ಬೆಳೆನಷ್ಟ ಈ ರೀತಿಯಾಗಿದೆ.

ವರ್ಷ	ಪ್ರಕರಣಗಳ ಸಂಖ್ಯೆ	ಮೊತ್ತ
2000-2001		
ಪ್ರಾಣಹಾನಿ	53	ರೂ.46.81 ಲಕ್ಷ
ಬೆಳೆನಷ್ಟ	15836	ರೂ.71.13 ಲಕ್ಷ

ಆ) ಪರಿಹಾರ ನೀಡಲಾಗಿದೆ.

ಇ) ಕಾಡಾನೆಗಳ ಹಾವಳಿ ತಪ್ಪಿಸಲು ಆನೆ ನಿರೋಧಕ ಕಂದಕಗಳನ್ನು ಕಾಡಿನ ಸುತ್ತಲೂ ತೋಡಲಾಗುತ್ತಿದೆ. ಅರಣ್ಯ ಸರಹದ್ದುಗಳಲ್ಲಿ ತಂತಿಬೇಲಿ ಸಹ ನಿರ್ಮಾಣ ಮಾಡಲಾಗಿದೆ. ಹಾಗೂ ಹಿಡುವಳಿ ಪ್ರದೇಶಗಳಿಗೆ ಬಂದ ಕಾಡಾನೆಗಳನ್ನು ಬೆದರಿಸಲು ಪಟಾಕಿಗಳನ್ನು ಬಳಸಿ ಆನೆಗಳನ್ನು ಓಡಿಸಲು ಪ್ರತ್ಯೇಕವಾಗಿ ವಾಚರ್‌ಗಳನ್ನು ಸೂಕ್ಷ್ಮ ಪ್ರದೇಶಗಳಲ್ಲಿ ನೇಮಿಸಿಕೊಂಡು ಅವರುಗಳ ಸಹಾಯದಿಂದ ಕಾಡಾನೆಗಳನ್ನು ಅರಣ್ಯ ಪ್ರದೇಶಕ್ಕೆ ಓಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಬರಪರಿಹಾರ ಕಾಮಗಾರಿಗಳಿಗಾಗಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿದ ಮೊತ್ತ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 686(992)

ಸದಸ್ಯರ ಹೆಸರು : ಶ್ರೀ ಭಕ್ತವತ್ಸಲಂ ಎಂ.(ಕೆ.ಜಿ.ಎಫ್.)

ಉತ್ತರಿಸುವ ಸಚಿವರು : ಶ್ರೀ ಹೆಚ್.ಶ್ರೀಕಂಠಯ್ಯ(ಕಂದಾಯ ಸಚಿವರು)

ಪ್ರಶ್ನೆ

1) ಬರ ಪರಿಹಾರ ಕಾಮಗಾರಿಗಾಗಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿರುವ ಒಟ್ಟು ಮೊತ್ತ ಎಷ್ಟು?

2) ಬರ ಪರಿಹಾರ ಕಾಮಗಾರಿಗಾಗಿ ರಾಜ್ಯ ಸರ್ಕಾರವು ಇದುವರೆಗೆ ವೆಚ್ಚ ಮಾಡಿರುವ ಒಟ್ಟು ಮೊತ್ತವೆಷ್ಟು?

3) ಕೋಲಾರ ಜಿಲ್ಲೆಗೆ ಬಿಡುಗಡೆ ಮಾಡಿರುವ ಮೊತ್ತವೆಷ್ಟು ಮತ್ತು ಅದರಲ್ಲಿ ಕೆ.ಜಿ.ಎಫ್.ಗೆ ಬಿಡುಗಡೆ ಮಾಡಿರುವ ಮೊತ್ತವೆಷ್ಟು? ಹಾಗೂ ಪರಿಹಾರ ಕಾಮಗಾರಿಗಾಗಿ ಖರ್ಚು ಮಾಡಲಾಗಿರುವ ವೆಚ್ಚವೆಷ್ಟು?

ಉತ್ತರ

1) ರೂ.58.72.ಕೋಟಿ

2) ರೂ.103.00 ಕೋಟಿಗಳು